# ಬ್ರಹ್ಮಚರ್ಯೆ ಎಂಬ ಭ್ರಮೆಯ ಬಗ್ಗೆ

ಭಾರತೀಯ ತತ್ತ್ವ ಮೀಮಾಂಸೆಯಲ್ಲಿ ಹೇಳಲಾಗಿರುವ ನಾಲ್ಕು ಆಶ್ರಮಗಳಲ್ಲಿ ಬ್ರಹ್ಮಚರ್ಯ ಮೊದಲನೆಯದು. ಈ ಚತುರ್ವಿದ ಆಶ್ರಮಗಳ ಮೂಲ ಸ್ವರೂಪವು ವೈಜ್ಞಾನಿಕವಾದ ನೆಲೆಯ ಮೇಲೆ ಕಟ್ಟಲ್ಪಟ್ಟಿದೆ. ಅದರಲ್ಲಿರುವ ಜೀವನ ಮೌಲ್ಯಗಳನ್ನು ಪಾಲಿಸುವುದರಿಂದ ಜೀವನ ಪರಿಶುದ್ಧ ನಡೆಯನ್ನು ಸಾಧಿಸಿದಂತಾಗಿ ಸುಖೀ ಕುಟುಂಬ ಮತ್ತು ತನ್ಮೂಲಕ ಸುಖೀ ಸಮಾಜ ನಿರ್ಮಾಣವಾಗುತ್ತದೆಂಬ ಆದರ್ಶದ ಆಶಯ ಇಲ್ಲಿ ಕೆಲಸ ಮಾಡಿದೆ. ಈ ಚತುರ್ವಿಧ ಆಶ್ರಮಗಳು ಕೂಡ ಪುರುಷ ಪ್ರಾಧಾನ್ಯ ನೆಲೆಯಲ್ಲಿ ರೂಪಿತವಾಗಿರುವುದನ್ನು ಗಮನಿಸಬಹುದು. ಬಹುಶಃ ಸ್ತ್ರೀ ದಾಸಿಯಾಗಿಯೋ ಪರಿಚಾರಿಕೆಯಾಗಿಯೋ ಅಥವಾ ಸಂತಾನವನ್ನು ಮುಂದುವರಿಸಲು ಬೇಕಾದ ಸಾಧನವಾಗಿಯೋ ಪರಿಗಣಿತವಾಗಿದ್ದುದರಿಂದ ಅವಳ ಆಸೆ ಮತ್ತು ದೃಷ್ಟಿ ಧೋರಣೆಗಳು ಅಪ್ರಸ್ತುತವಾದವು. ಇಂಥ ಮಾತುಗಳನ್ನು ವಿರೋಧಿಸಲೆಂದೇ ಅಲ್ಲೊಂದು ಇಲ್ಲೊಂದು ಅಪವಾದವಾಗಿ ಬರುವ ಸ್ತ್ರೀಯರನ್ನು ಉದಾಹರಣೆಯಾಗಿ ನೀಡಿ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳುವವರು ಕಡಿಮೆಯೇನಿಲ್ಲ. ಇಷ್ಟಾದರೂ ಈ ಚತುರ್ವಿಧ ಆಶ್ರಮಗಳನ್ನು ಆಯಾ ಅವಸ್ಥೆಗಳ ನಿಯಮಕ್ಕನುಗುಣವಾಗಿ ಜೀವಿಸುವುದರಿಂದ ಜೀವಿಗಳಲ್ಲಿ ಸಾಮರಸ್ಯ ಹಾಗೂ ಬದುಕಿನ ಎಲ್ಲ ಅವಸ್ಥೆ–ಮಜಲಿನ ಅನುಭವ ಉಂಟಾಗಿ ಜೀವನ ಪರಿಪಕ್ವತೆಯ ಕಡೆ ಸಾಗುತ್ತದೆ. ನಮ್ಮ ವೇದಕಾಲೀನ ಜೀವನ ವ್ಯವಸ್ಥೆ ಬಹುಶಃ ಇದೇ ರೀತಿ ಬದುಕು ಮಾಡುತ್ತಿತ್ತೆಂದು ತೋರುತ್ತದೆ.

ಆಶ್ರಮ ಧರ್ಮದ ಮೂಲ ಉದ್ದೇಶವೇ ಆಯಾಯ ವಯೋಮಾನದಲ್ಲಿ ಪ್ರಕೃತಿ ಸಹಜವಾದ ಸಹಜಕ್ರಿಯೆ ಮತ್ತು ಪ್ರವೃತ್ತಿಗಳನ್ನು ರುಜು ಮಾರ್ಗದಲ್ಲಿ ಅನುಭವಿಸಲೆಂಬುದೇ ಆಗಿದೆ. ಆದುದರಿಂದ ಆಶ್ರಮ ಧರ್ಮವು ಯಾವುದನ್ನೂ ನಿರಾಕರಿಸಿಯೂ ಇಲ್ಲ, ತುಚ್ಛೀಕರಿಸಿಯೂ ಇಲ್ಲ. ಈ ಆಶಯವು ಜೀವನ ಮಾರ್ಗದಲ್ಲಿ ಚಾಲ್ತಿಯಲ್ಲಿದ್ದ ಕಾರಣದಿಂದಾಗಿ ಪ್ರಕೃತಿ ನಿಯತಿಯು ಪಾಲಿತ ವಾಗುತ್ತಿತ್ತು, ಜೀವಿತದ ಅವಧಿಯು ವಾನಪ್ರಸ್ಥ ಅಥವಾ ಸಂನ್ಯಾಸತ್ವದ ನೆಲೆಗೆ ಬರುವ ಹೊತ್ತಿಗೆ ಅನುಭವದ ಮಾಗುತನ ಪ್ರಾಪ್ತವಾಗಿ ವ್ಯಕ್ತಿ ಬದುಕನ್ನು ಸಮಗ್ರವಾಗಿ ಪರಿಭಾವಿಸುವ, ವಿವೇಚಿಸುವ, ಕಿರಿಯರಿಗೆ ಮಾರ್ಗದರ್ಶನ ನೀಡುವ ಆದರ್ಶವಾಗಿಬಿಡುತ್ತಿದ್ದ. ಆ ಬಗೆಯ ಆದರ್ಶ ನಾಗರಿಕರು ರೂಪಿತವಾಗುತ್ತಿದ್ದುದರಿಂದಲೇ ನಾಗರಿಕ, ನೈತಿಕ ಸಮಾಜ ಚಲನೆಯಲ್ಲಿರುತ್ತಿತ್ತು.

ಸಮಸ್ಯೆ ಪ್ರಾರಂಭವಾಗಿದ್ದೇ ಕಾಮವನ್ನು ತುಚ್ಛವೆಂದು ಪರಿಭಾವಿಸ ತೊಡಗಿದಾಗನಿಂದ. ಆ ಭಾವನೆ ಭಾರತೀಯ ಪುರಾತನ ತತ್ವಮೀಮಾಂಸೆಯ ಹಿನ್ನಲೆಯಲ್ಲಿ ಬರಲೇಬಾರದಾಗಿತ್ತು. ಕಾಮವೆಂಬುದು ಪಾಪದ ಕ್ರಿಯೆಯಲ್ಲ. ಅದು ಅನೈತಿಕ ಮಾರ್ಗದಲ್ಲಿ, ಬಲವಂತ ಮತ್ತು ಕ್ರೌರ್ಯದ ಮಾರ್ಗದಲ್ಲಿ ಆಚರಣೆಗೊಂಡಾಗ ಮಾತ್ರ ಪಾಪವಾಗುತ್ತದೆ. ಕಾಮ ಸಂಕುಲದ ಮುಂದುವರಿಕೆಗಾಗಿ ಪ್ರಕೃತಿ ನೀಡಿರುವ ವರದಾನ. ಸಸ್ಯ ಕೀಟಾದಿ ಸಕಲೆಂಟು ಜೀವರಾಶಿಗಳ ಸಂತತಿ ಮುಂದುವರಿಕೆಯ ಅನಿವಾರ್ಯ ಸಾಧನ. ಇದನ್ನು ಪಾಪವೆಂದು ಕರೆದು ನಿರಾಕರಿಸುವ ಮನಸ್ಥಿತಿಯೇ ಆರೋಗ್ಯಕರವಾದುದಲ್ಲ ಮತ್ತು ನಿಯತಿ ವಿರೋಧಿಯಾದುದು. ಆಶ್ರಮ ಧರ್ಮದಲ್ಲಿ ಬ್ರಹ್ಮಚರ್ಯೆ ವೆಂಬುದು ಶಿಸ್ತು, ಸಂಯಮ ಬದ್ಧ ಅಧ್ಯಯನದಲ್ಲಿ ಅನುಸರಿಸಬೇಕಾದ ಕಟ್ಟುನಿಟ್ಟಾದ ಜೀವನ ಮಾರ್ಗವನ್ನು ತಿಳಿಸುತ್ತದೆ. ವಿದ್ಯೆ ಕಲಿಯುವಾಗ ಮನಸ್ಸು ಚಂಚಲಗೊಳ್ಳಬಾರದು. ಬಾಲ್ಯದಿಂದ ಇಪ್ಪತ್ತೈದನೆಯ ವಯಸ್ಸಿನವರೆಗೆ ಇಂದ್ರಿಯವನ್ನು ನಿಗ್ರಹಿಸಿದರೆ ವಿದ್ಯೆ ತಲೆಗೆ ಹೋಗುತ್ತದೆ. ಗೃಹಸ್ಥ ಜೀವನಕ್ಕೆ ಕಾಲಿಟ್ಟ ಮೇಲೆ ಕಾಮದ ಅನುಭವ ಕೇವಲ ಸಂತಾನ ಮುಂದುವರಿಕೆಯ ಸಾಧನ ಮಾತ್ರವಾಗದೆ ಸಹಜ ಸುಖದ ಕಲೆಯೂ ಆಗಿ ಅರಳುತ್ತದೆ ಎಂಬ ಅರಿವು ನಮ್ಮವರಿಗಿತ್ತು. ಅದನ್ನು ನಮ್ಮ ಪೂರ್ವಿಕರು ಮನಗಂಡಿದ್ದರು. ಆದುದರಿಂದಲೇ ಇಂದಿಗೂ ಜಗತ್ತೇ ಅಚ್ಚರಿಯಿಂದ ಪರಿಗಣಿಸುತ್ತಿರುವ ವಾತ್ಸಾಯನನ ಕಾಮಸೂತ್ರ ಕ್ರಿಸ್ತಪೂರ್ವದಲ್ಲೇ ನಮ್ಮಲ್ಲಿ ರಚಿತಗೊಂಡಿದೆ.

ಬ್ರಹ್ಮಚರ್ಯವೆಂಬುದು ಅತ್ಯಂತ ಪವಿತ್ರ ಜೀವನ ವಿಧಾನವೆಂಬ ಭಾವನೆ ಬರಲು ಕ್ರಿಯೆಯನ್ನು ಮಾಯೆಯೆಂದು ಪರಿಗಣಿಸಿದ್ದು ಒಂದು ಕಾರಣವಾದರೆ, ಇಂದ್ರಿಯ ನಿಗ್ರಹವನ್ನು ಮಾಡುವ ಸಂಯಮ ಸಾಧಿಸಲಾಗದ ವಿಫಲತೆಯೂ ಕಾರಣವೂ ಮತ್ತೊಂದಾಗಿರಬೇಕು. ಬ್ರಹ್ಮಚರ್ಯೆಯಿಂದ ಅದ್ಭುತವಾದ ಸಿದ್ಧಿಗಳು ಪ್ರಾಪ್ತವಾಗುತ್ತವೆಯೆಂಬ ಭ್ರಮೆಯೂ ಕೆಲಸ ಮಾಡಿದೆ. ವೀರ್ಯನಾಶದಿಂದ ದೇಹ ಮನಸ್ಸುಗಳು ದುರ್ಬಲವಾಗುತ್ತವೆ; ಅದರ ನಿಗ್ರಹದಿಂದ ವಜ್ರಕಾಯ ಪ್ರಾಪ್ತವಾಗುತ್ತದೆಯೆಂಬ ಹುಸಿ ನಂಬಿಕೆಯ ದಾಸರಾದ ದುರ್ಬಲ ಮನಸ್ಥಿತಿಯೂ ಕೆಲಸ ಮಾಡಿದೆ. ಈ ಹುಸಿ ನಂಬಿಕೆ ಮತ್ತು ಭ್ರಮೆಗಳಿಂದಾಗಿ ಅತ್ಯಮೂಲ್ಯವಾದ ಗೃಹಸ್ಥ ಧರ್ಮವನ್ನು ನಿರಾಕರಿಸಿ ಸಂನ್ಯಾಸಾಶ್ರಮಕ್ಕೆ ನೇರವಾಗಿ ಜಿಗಿಯುವ ಪರಿಕ್ರಮ ಧಾರ್ಮಿಕ ವಲಯಗಳಲ್ಲಿ ಪ್ರಾರಂಭವಾಯಿತು. ಇದರಿಂದ ಪ್ರಕೃತಿ ನಿಯತಿಗೆ ವಿರುದ್ಧವಾದ ಋತುಸತ್ಯವನ್ನು ಮೀರುವ ಪ್ರಯತ್ನವಾದಂತಾಯಿತು. ಇದಕ್ಕೆ ಸಾಧಕನಿಗೆ ಅಗಾಧವಾದ ಆತ್ಮಸಂಯಮ, ಇಂದ್ರಿಯ ನಿಗ್ರಹ, ನಿರ್ಮೋಹ ಮನಸ್ಥಿತಿಗಳು ಬೇಕಾಗುತ್ತವೆ. ಆಧುನಿಕ ಯುಗದಲ್ಲಿ ವಿವೇಕರಂಥವರು ಅಪರೂಪಕ್ಕೆ ಮಾದರಿಯಾಗಿ ನಿಲ್ಲುತ್ತಾರೆ. ಅವರ ನಡೆಯನ್ನು ಸಹ ಸಹಜ ಮಾರ್ಗವೆಂದು ಕರೆಯಲಾಗದು.

ಸಂನ್ಯಾಸ ಜೀವನಕ್ಕೆ ಬ್ರಹ್ಮಚರ್ಯವೆಂಬುದು ಅನಿವಾರ್ಯವೆಂದು ಧಾರ್ಮಿಕ ಸಂಸ್ಥೆಗಳು ತೀರ್ಮಾನಿಸಿ ಬಾಲಕರನ್ನೇ ಮರಿಗಳನ್ನಾಗಿ ಬೆಳೆಸಿ, ಮುಂದೆ ಅವರನ್ನೇ ಪೀಠಾಧೀಶರನ್ನಾಗಿಸುವ ಪರಿಪಾಠ ಬೆಳೆಯಿತು. ಅದೇ ಸಂಪ್ರದಾಯವಾಯಿತು. ಆಗ ಬೆಕ್ಕು ಕದ್ದು ಹಾಲು ಕುಡಿಯುವ ಪ್ರಕೃತಿಕ್ರಿಯೆ ಸಲೀಸಾಗಿ ನಡೆಯತೊಡಗಿತು.

**■ ಶಿಕಾಕು**

## ಮಾತೇ ಮುತ್ತು

★ ಸತ್ಯ ಮಾರ್ಗದಲ್ಲಿ, ಧರ್ಮಾಚರಣೆಯಲ್ಲಿ ಶುಚಿಯಾಗಿರಲು ಯಾವಾಗಲೂ ಆಸಕ್ತಿ ಇರಬೇಕು. ಶಿಷ್ಯರನ್ನು ಧರ್ಮದಿಂದ ನಡೆಯುವಂತೆ ಮಾಡಬೇಕು. ಮಾತು, ತೋಳು, ಹೊಟ್ಟೆ ಇವುಗಳನ್ನು ಹತೋಟಿಯಲ್ಲಿಡಬೇಕು.

–ಮನುಸ್ಮೃತಿ

★ ಶೂರ, ವಿದ್ಯಾವಂತ ಮತ್ತು ಸೇವಾ ಕಾರ್ಯದಲ್ಲಿ ದಕ್ಷ– ಈ ಮೂವರು ಭೂಮಿಯೆಂಬ ಲತೆಯಿಂದ ಚಿನ್ನದ ಹೂಗಳನ್ನು ಬಿಡಿಸಿಕೊಳ್ಳುತ್ತಾರೆ.

–ಮಹಾಭಾರತ

★ ಮೋಸದಿಂದ ಗಳಿಸಿದ ಸಂಪತ್ತಿನ ದಾನವನ್ನು ದೇವರು ಸ್ವೀಕರಿಸುವುದಿಲ್ಲ.

–ಮಹಮದ್ ಪೈಗಂಬರ್

★ ಅಧ್ಯಾತ್ಮವೆಂದರೆ ಹೆಚ್ಚಿನದೇನಲ್ಲ. ವ್ಯಕ್ತಿ ಸಾತ್ವಿಕನಾಗಿ, ಸದಾ ಕ್ರಿಯಾಶೀಲನಾಗಿ, ಸಮಷ್ಟಿ ದೃಷ್ಟಿ ಬೆಳೆಸಿಕೊಂಡು ಬದುಕುವುದೇ ಆಗಿದೆ.

–ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ

★ ರಾಮಾಯಣ ಬೇಸತ್ತ ಜಗದ ಕಾವ್ಯವಲ್ಲ; ಅದರಲ್ಲಿ ಶಾಂತಿ ಪಾಠವಿಲ್ಲ, ಸಮೃದ್ಧ ಜೀವಿತ ವನ್ನು ನಡೆಸಬಯಸುವವರ ಆದರ್ಶ ಕಾವ್ಯವದು.

–ಪು.ತಿ.ನರಸಿಂಹಾಚಾರ್

★ ಗಂಡ ಹೆಂಡತಿ ಸಂಸಾರದ ಎರಡು ಚಕ್ರಗಳು. ಸಂಸಾರ ರಥವನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗುವುದು ಅವರ ಕರ್ತವ್ಯ.

–ಸಂಚಿ ಹೊನ್ನಮ್ಮ

★ ನೀನು ಕೆಲಸ ಮಾಡುವಾಗ ಇನ್ನೂ 'ನೂರು ವರ್ಷ ಜೀವಿಸುತ್ತೇನೆ' ಎಂದು ಯೋಚಿಸು. ಆದರೆ ಪ್ರಾರ್ಥಿಸುವಾಗ 'ನಾಳೆಯೇ ಸಾಯುತ್ತೇನೆ' ಎಂದು ಯೋಚಿಸು.

–ಬೆಂಜಮಿನ್ ಫ್ರಾಂಕ್ಲಿನ್

★ ಭಗವಂತ ಪ್ರತಿಕ್ಷಣ ನನ್ನನ್ನು ನೋಡುತ್ತಿರುತ್ತಾನೆ ಎಂದು ಸದಾ ನೆನಪು ಮಾಡಿಕೊಳ್ಳುವವನು ಕ್ರೋಧದಿಂದ ಪಾರಾಗುತ್ತಾನೆ.

–ಮದನಮೋಹನ ಮಾಲವೀಯ

★ ದುಷ್ಟರು ಹೆದರಿಕೆಯಿಂದ ಆಜ್ಞೆ ಪಾಲಿಸುತ್ತಾರೆ, ಒಳ್ಳೆಯವರು ಪ್ರೀತಿಯಿಂದ ಪಾಲಿಸುತ್ತಾರೆ.

–ರವೀಂದ್ರನಾಥ ಠಾಕೂರ್